13/1

# 2011

## HISTORY

### Paper 1

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D. Not more than two from any one section.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

1. (a) Mention the scope and subject matter of the Vedic literature.

   (b) What are the factors that favoured the growth and expansion of Magadha ?

   (c) What are the characteristic features of Sufism as it developed in medieval India ?

   (d) What were the factors leading to the formation of Maratha Confederacy ?

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ವೇದಕಾಲೀನ ಸಾಹಿತ್ಯದ ವ್ಯಾಪ್ತಿ ಮತ್ತು ವಿಷಯ ವಸ್ತುವನ್ನು ತಿಳಿಸಿ.

(ಬಿ) ಮಗಧ ಸಾಮ್ರಾಜ್ಯದ ಬೆಳವಣಿಗೆ ಹಾಗೂ ವಿಸ್ತರಣೆಗೆ ಅನುಕೂಲಕರವಾಗಿ ಪರಿಣಮಿಸಿದ. ಸಂಗತಿಗಳು ಯಾವುವು ?

(ಸಿ) ಮಧ್ಯಕಾಲೀನ ಭಾರತದಲ್ಲಿ ಬೆಳವಣಿಗೆಯಾದ ಸೂಫಿ ಪಂಥದ ವಿಶಿಷ್ಟ ಲಕ್ಷಣಗಳು ಯಾವುವು ?

(ಡಿ) ಮರಾಠ ಒಕ್ಕೂಟವು ರೂಪುಗೊಳ್ಳುವುದಕ್ಕೆ ಎಡೆಮಾಡಿಕೊಟ್ಟ ಸಂಗತಿಗಳು ಯಾವುವು ?

## PART B

*10×10=100*

*Answer each question in about 100 words. Each question carries 10 marks.*

**2.** Write a note on the westerly trade of the Harappan cities.

**3.** What were the functions of the ritual of sacrifice in Vedic society ?

**4.** How do you classify the edicts of Asoka ? Give a brief account of each category.

**5.** How did trade develop in the post-Mauryan period particularly in North-Western India ?

**6.** Why is the Arab conquest of Sind described as without any results ?

**7.** Write brief notes on *brahmadeya* and *devadana* as forms of land tenure in early medieval South India.

**8.** Did the early years of the Sultanate of Delhi go through an "urban revolution" ?

**9.** Bring out the role of *nayakas* in the polity of Vijayanagar. Were they feudal ?

**10.** What are the differences between *mansabdari* and *jagirdari* systems ?

**11.** Were the regional states that emerged in the post-Mughal period so many splinters of the empire ?

## ಭಾಗ B

*10×10=100*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 100 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಹರಪ್ಪಾದ ನಗರಗಳ ಪಶ್ಚಿಮಾಭಿಮುಖ ವ್ಯಾಪಾರ ಕುರಿತು ಒಂದು ಟಿಪ್ಪಣಿ ಬರೆಯಿರಿ.

**3.** ವೇದಕಾಲೀನ ಸಮಾಜದಲ್ಲಿ ಸಮರ್ಪಣೆ ಆಚರಣೆಯ ಉದ್ದೇಶಗಳು ಏನು ?

**4.** ಅಶೋಕನ ಶಾಸನಗಳನ್ನು ಯಾವ ರೀತಿ ವರ್ಗೀಕರಿಸುತ್ತೀರಿ ? ಪ್ರತಿಯೊಂದು ಗುಂಪಿನ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.

**5.** ಮೌರ್ಯರ ಕಾಲಾನಂತರದಲ್ಲಿ, ವಿಶೇಷವಾಗಿ ವಾಯುವ್ಯ ಭಾರತದಲ್ಲಿ ವ್ಯಾಪಾರವು ಹೇಗೆ ಅಭಿವೃದ್ಧಿ ಗೊಂಡಿತು ?

**6.** ಸಿಂದ್ ಮೇಲಿನ ಅರಬ್ ದಿಗ್ವಿಜಯವನ್ನು ನಿಷ್ಫಲವಾದುದು ಎಂದು ವರ್ಣಿಸಲು ಕಾರಣವೇನು ?

**7.** ದಕ್ಷಿಣ ಭಾರತದ ಮಧ್ಯಕಾಲೀನ ಆರಂಭದಲ್ಲಿದ್ದ ಬ್ರಹ್ಮದೇಯ ಮತ್ತು ದೇವದಾನ ಎಂಬ ಭೂಹಿಡುವಳಿಯ ರೂಪಗಳ ಬಗ್ಗೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

**8.** ದೆಹಲಿಯ ಸುಲ್ತಾನ್ ಆಡಳಿತದ ಆರಂಭದ ವರ್ಷಗಳು "ನಗರ ಕ್ರಾಂತಿ"ಗೆ ಒಳಗಾಗಿದ್ದವೆ ?

**9.** ವಿಜಯನಗರದ ರಾಜ್ಯಾಡಳಿತದಲ್ಲಿ 'ನಾಯಕ'ರ ಪಾತ್ರವನ್ನು ನಿರೂಪಿಸಿ. ಅವರ ಸ್ವಭಾವ ಪಾಳೆಗಾರಿಕೆಯದಾಗಿತ್ತೇ ?

**10.** ಮನ್‌ಸಬ್ದಾರಿ ಮತ್ತು ಜಾಗೀರ್‌ದಾರೀ ಪದ್ಧತಿಗಳ ನಡುವಿನ ವ್ಯತ್ಯಾಸಗಳೇನು ?

**11.** ಮೊಘಲ್ ಕಾಲಾನಂತರದಲ್ಲಿ ಉದ್ಭವಿಸಿದ ಪ್ರಾದೇಶಿಕ ರಾಜ್ಯಗಳು ಆ ಸಾಮ್ರಾಜ್ಯ ಒಡೆದು ಬಂದ ಚಿಕ್ಕಚಿಕ್ಕ ಗುಂಪುಗಳಾಗಿದ್ದವೆ ?

## PART C

6×15=90

*Answer each question in about 150 words. Each question carries 15 marks.*

**12.** Account for the expansion of agriculture and the resultant developments in society in the later Vedic period.

**13.** In what way were the "Second Urbanization" and the rise of the heterodox religions in the Gangetic valley related ?

**14.** Give details of the philosophy of Sankara and place them in their historical context.

**15.** How far was the *Bhakti* Movement in North India indebted to that in South India in an earlier context ?

**16.** Why did the Portuguese fail to establish and maintain an empire in India ?

**17.** Summarise the debate on potentialities of a capitalist development in Mughal India.

## ಭಾಗ C

6×15=90

*ಪ್ರತಿಯೊಂದು ಪ್ರಶ್ನೆಗೂ ಸುಮಾರು 150 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ವೇದಗಳ ಆನಂತರದ ಕಾಲಭಾಗದಲ್ಲಿ ಕೃಷಿಯ ವಿಸ್ತರಣೆ ಮತ್ತು ಸಮಾಜದಲ್ಲಿ ಅದರಿಂದಾದ ಬೆಳವಣಿಗೆಗಳಿಗೆ ಕಾರಣಗಳನ್ನು ನಿರೂಪಿಸಿ.

**13.** ಗಂಗಾ ಕಣಿವೆಯಲ್ಲಿ "ಎರಡನೇ ನಗರೀಕರಣ" ಮತ್ತು ಸಂಪ್ರದಾಯ ವಿರೋಧಿ ಧರ್ಮಗಳ ಬೆಳವಣಿಗೆಗಳು ಯಾವ ರೀತಿಯಲ್ಲಿ ಸಂಬಂಧ ಹೊಂದಿದ್ದವು ?

**14.** ಶಂಕರಾಚಾರ್ಯರ ತತ್ವಶಾಸ್ತ್ರದ ವಿವರಗಳನ್ನು ನಿರೂಪಿಸಿ ಮತ್ತು ಚಾರಿತ್ರಿಕ ಸಂದರ್ಭದಲ್ಲಿ ಅವುಗಳ ಸ್ಥಾನವನ್ನು ಗುರುತಿಸಿ.

**15.** ಆರಂಭಿಕ ಸಂದರ್ಭದಲ್ಲಿ, ಉತ್ತರ ಭಾರತದ ಭಕ್ತಿ ಚಳುವಳಿಯು ಎಷ್ಟರ ಮಟ್ಟಿಗೆ ದಕ್ಷಿಣ ಭಾರತದಲ್ಲಿನ ಚಳುವಳಿಗೆ ಋಣಿಯಾಗಿದ್ದಿತು ?

**16.** ಭಾರತದಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಲು ಹಾಗೂ ಅದನ್ನು ಕಾಪಾಡಿಕೊಂಡು ಹೋಗಲು ಪೋರ್ಚುಗೀಸರಿಗೆ ಏಕೆ ಸಾಧ್ಯವಾಗಲಿಲ್ಲ ?

**17.** ಮೊಘಲ್ ಭಾರತದಲ್ಲಿ ಬಂಡವಾಳಶಾಹಿ ಬೆಳವಣಿಗೆಯ ಸಾಧ್ಯತೆಗಳನ್ನು ಕುರಿತ ಚರ್ಚೆಯ ಸಾರಾಂಶವನ್ನು ತಿಳಿಸಿ.

## PART D

*3×30=90*

*Answer any **three** questions in about 300 words each, choosing not more than **two** from any one section. Each question carries 30 marks.*

### SECTION I

**18.** Write an essay on the nature of state under the Mauryas.

**19.** "Rather than the Guptas reviving Indian nationalism, it was Indian nationalism that revived the Guptas." Discuss.

**20.** Write an essay on the local bodies under the Cholas with special reference to the working of the *sabha*.

### SECTION II

**21.** How did a "composite culture" evolve in India in the medieval period ? Identify its components and the factors responsible for the process.

**22.** Examine the relations of Vijayanagar with its "Hindu" neighbours. To what extent does your answer support the claim that it provided leadership to the Hindus against Muslim onslaught ?

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಗೂ ಸುಮಾರು 300 ಪದಗಳಲ್ಲಿ ಉತ್ತರಿಸಿ. ಯಾವುದೇ ಭಾಗದಿಂದ ಎರಡಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಆಯ್ಕೆ ಮಾಡಿಕೊಳ್ಳುವಂತಿಲ್ಲ. ಪ್ರತಿ ಪ್ರಶ್ನೆಗೆ 30 ಅಂಕಗಳು.*

### ಭಾಗ I

**18.** ಮೌರ್ಯರ ಆಳ್ವಿಕೆಯಲ್ಲಿ ರಾಜ್ಯದ ಸ್ವರೂಪ ಹೇಗಿತ್ತು ಎಂಬ ಬಗ್ಗೆ ಒಂದು ಪ್ರಬಂಧ ಬರೆಯಿರಿ.

**19.** "ಭಾರತದ ರಾಷ್ಟ್ರೀಯತೆಯನ್ನು ಗುಪ್ತರು ಪುನರುಜ್ಜೀವನಗೊಳಿಸುವುದಕ್ಕೆ ಬದಲಾಗಿ ಭಾರತದ ರಾಷ್ಟ್ರೀಯತೆಯು ಗುಪ್ತರನ್ನು ಪುನರುಜ್ಜೀವನಗೊಳಿಸಿತು." ಚರ್ಚಿಸಿ.

**20.** 'ಸಭಾ'ದ ಕಾರ್ಯನಿರ್ವಹಣೆಯನ್ನು ವಿಶೇಷವಾಗಿ ಉಲ್ಲೇಖಿಸುವುದರೊಂದಿಗೆ ಚೋಳರ ಆಳ್ವಿಕೆಯ ಸ್ಥಳೀಯ ಆಡಳಿತ ಸಂಸ್ಥೆಗಳ ಬಗ್ಗೆ ಒಂದು ಪ್ರಬಂಧ ಬರೆಯಿರಿ.

### ಭಾಗ II

**21.** ಮಧ್ಯಕಾಲೀನ ಯುಗದಲ್ಲಿ, ಒಂದು "ಸಮ್ಮಿಶ್ರ ಸಂಸ್ಕೃತಿ" ಭಾರತದಲ್ಲಿ ಹೇಗೆ ರೂಪುಗೊಂಡಿತು ? ಇದರ ಘಟಕಾಂಶಗಳನ್ನು ಗುರುತಿಸಿ ಮತ್ತು ಈ ಪ್ರಕ್ರಿಯೆಗೆ ಕಾರಣವಾದ ಅಂಶಗಳನ್ನು ವಿವರಿಸಿ.

**22.** ವಿಜಯನಗರವು ತನ್ನ "ಹಿಂದೂ" ನೆರೆ ಹೊರೆಯೊಂದಿಗೆ ಹೊಂದಿದ್ದ ಸಂಬಂಧಗಳನ್ನು ಪರಿಶೀಲಿಸಿ. ಮುಸ್ಲಿಮರ ಧಾಳಿಗೆ ಪ್ರತಿಯಾಗಿ ಅದು ಹಿಂದೂಗಳಿಗೆ ನಾಯಕತ್ವ ದೊರಕಿಸಿಕೊಟ್ಟಿತು ಎಂಬ ವಾದವನ್ನು ನಿಮ್ಮ ಉತ್ತರ ಎಷ್ಟರ ಮಟ್ಟಿಗೆ ಸಮರ್ಥಿಸುತ್ತದೆ ?

# 2011

## ಇತಿಹಾಸ

## ಪ್ರಶ್ನೆಪತ್ರಿಕೆ 1

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

---

### ಸೂಚನೆಗಳು

ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.

ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.

*ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :*

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.

*ಭಾಗ A, B ಮತ್ತು C ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.*
*ಭಾಗ D ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ. ಯಾವುದೇ ಒಂದು ಭಾಗದಿಂದ 2 ಪ್ರಶ್ನೆಗೆ ಮಾತ್ರ.*

SEAL

---

***Note :*** *The English version of the instructions is printed on the front cover of this question paper.*

13/2

# 2011

## HISTORY

### Paper 2

*Time : 3 Hours ]* *[ Maximum Marks : 300*

SEAL

## INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D. Not more than two from any one section.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

4×5=20

*Answer each question in about 50 words. Each question carries 5 marks.*

1. (a) Write a short note on the Permanent Settlement in Bengal.

   (b) What is Wagon Tragedy ?

   (c) What were the features of Scientific Revolution ?

   (d) What is meant by "Utopian Socialism" ?

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಬಂಗಾಳದಲ್ಲಿ ಖಾಯಂ ಇತ್ಯರ್ಥ ಕುರಿತು ಕಿರು ಟಿಪ್ಪಣಿ ಬರೆಯಿರಿ.

(ಬಿ) ವ್ಯಾಗನ್ ದುರಂತ ಎಂದರೆ ಯಾವುದು ?

(ಸಿ) ಯಾವುವು ವೈಜ್ಞಾನಿಕ ಕ್ರಾಂತಿಯ ಲಕ್ಷಣಗಳಾಗಿದ್ದವು ?

(ಡಿ) "ಕಾಲ್ಪನಿಕ ಆದರ್ಶದ ಸಮಾಜವಾದ" ಎಂದರೇನು ?

## PART B

*10×10=100*

*Answer each question in about 100 words. Each question carries 10 marks.*

2. Explain the stages through which Hyder Ali emerged on the political scene of Mysore.

3. How did the principle of paramountcy work in India after 1857 ?

4. Write a note on the doctrines of the Brahmo Samaj.

5. What was RIN mutiny ? Bring out its role in the freedom struggle of India.

6. Write a note on the Havanur Committee Report.

7. Briefly describe the characteristic features of the Enlightenment.

8. To what extent was slavery *the* cause of American Civil War ?

9. How was Africa partitioned ?

10. Trace the stages through which Italy went Fascist.

11. What were the immediate consequences of the collapse of the Soviet Union ?

## ಭಾಗ B

*10×10=100*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 100 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಹೈದರಾಲಿಯು ಮೈಸೂರಿನ ರಾಜಕೀಯದಲ್ಲಿ ಯಾವ ಯಾವ ಹಂತಗಳ ಮೂಲಕ ಮೇಲೆಬಂದ ಎಂಬುದನ್ನು ವಿವರಿಸಿ.

**3.** 1857 ರ ನಂತರ ಭಾರತದಲ್ಲಿ ಸಾರ್ವಭೌಮತೆಯ ತತ್ವ ಹೇಗೆ ಕೆಲಸ ಮಾಡಿತು ?

**4.** ಬ್ರಹ್ಮ ಸಮಾಜ ಸಿದ್ಧಾಂತಗಳ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

**5.** RIN ದಂಗೆ ಎಂದರೇನು ? ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅದು ವಹಿಸಿದ ಪಾತ್ರವನ್ನು ನಿರೂಪಿಸಿ.

**6.** ಹಾವನೂರು ಸಮಿತಿಯ ವರದಿಯನ್ನು ಕುರಿತು ಒಂದು ಟಿಪ್ಪಣಿ ಬರೆಯಿರಿ.

**7.** ಜ್ಞಾನೋದಯದ ವಿಶಿಷ್ಟ ಗುಣಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

**8.** ಅಮೆರಿಕದ ಆಂತರಿಕ ಯುದ್ಧಕ್ಕೆ ಗುಲಾಮ ಪದ್ಧತಿಯು ಎಷ್ಟರ ಮಟ್ಟಿಗೆ ಕಾರಣವಾಗಿತ್ತು ?

**9.** ಆಫ್ರಿಕಾದ ವಿಭಜನೆ ಹೇಗೆ ನಡೆಯಿತು ?

**10.** ಇಟಲಿಯು ಯಾವ ಯಾವ ಹಂತಗಳ ಮೂಲಕ ಫ್ಯಾಸಿಸ್ಟ್ ಆಯಿತು ಎಂಬುದನ್ನು ಗುರುತಿಸಿ.

**11.** ಸೋವಿಯತ್ ಒಕ್ಕೂಟವು ಕುಸಿದ ತಕ್ಷಣ ಆದಂತಹ ಪರಿಣಾಮಗಳು ಯಾವುವು ?

## PART C

6×15=90

*Answer each question in about 150 words. Each question carries 15 marks.*

**12.** Bring out the extent of peasant participation in the revolt of 1857.

**13.** Analyse the economic critique of colonialism offered by the early leaders of Indian nationalism.

**14.** Give an account of the incident of Chauri-Chaura. Was it reason enough for the withdrawal of the Non-cooperation Movement ?

**15.** Analyse the programme of westernization in Russia under Peter the Great and show how far it succeeded.

**16.** What is meant by "Eastern Question" ? Bring out the imperialist designs behind it.

**17.** How did the Russian Revolution consolidate itself ?

## ಭಾಗ C

*6×15=90*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 150 ಪದಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** 1857ರ ದಂಗೆಯಲ್ಲಿ ರೈತಾಪಿ ವರ್ಗದ ಭಾಗವಹಿಸುವಿಕೆ ಎಷ್ಟರವರೆಗಿತ್ತು ಎಂಬುದನ್ನು ನಿರೂಪಿಸಿ.

**13.** ಭಾರತದ ರಾಷ್ಟ್ರೀಯತೆಯ ಆರಂಭದ ನೇತಾರರು ಮಾಡಿದ, ವಸಾಹತುಶಾಹಿಯ ಆರ್ಥಿಕ ವಿಮರ್ಶೆಯನ್ನು ವಿಶ್ಲೇಷಿಸಿ.

**14.** ಚೌರಿ-ಚೌರಾ ಘಟನೆಯ ಬಗ್ಗೆ ನಿರೂಪಿಸಿ. ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಳ್ಳುವುದಕ್ಕೆ ಇದೊಂದು ಕಾರಣವೇ ಸಾಕಾಯಿತೆ ?

**15.** ಪೀಟರ್ ದಿ ಗ್ರೇಟ್ ಅವರ ಅಧೀನದಲ್ಲಿ, ರಷ್ಯಾದ ಪಾಶ್ಚಿಮಾತ್ಯೀಕರಣದ ಕಾರ್ಯಕ್ರಮವನ್ನು ವಿಶ್ಲೇಷಿಸಿ ಮತ್ತು ಅದು ಎಷ್ಟರಮಟ್ಟಿಗೆ ಯಶಸ್ವಿಯಾಯಿತು ಎಂಬುದನ್ನು ತೋರಿಸಿ.

**16.** Eastern Question ಎಂದರೇನು ? ಇದರ ಹಿಂದಿರುವ ಸಾಮ್ರಾಜ್ಯಶಾಹಿ ವ್ಯೂಹಗಳನ್ನು ನಿರೂಪಿಸಿ.

**17.** ರಷ್ಯಾದ ಕ್ರಾಂತಿಯು ಹೇಗೆ ತಾನಾಗಿಯೇ ಬಲಗೊಂಡಿತು ?

[Turn over

## PART D

3×30=90

*Answer any **three** questions in about 300 words each, choosing not more than **two** from any one section. Each question carries 30 marks.*

### SECTION I

**18.** Write an essay on Indian National Movement, identifying the various stages and the results.

**19.** Give an account of the debates between the "Moderates" and "Extremists" in India's struggle for freedom. Do you think the differences were more imagined than real ?

**20.** How did the partition of India unfold itself ? Could it have been averted ?

### SECTION II

**21.** Write an essay on the French Revolution, bringing out its causes and features.

**22.** Bring out the consequences of the Industrial Revolution in the fields of economy, society and politics.

## ಭಾಗ D

*3×30=90*

*ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಗೂ ಸುಮಾರು 300 ಪದಗಳಲ್ಲಿ ಉತ್ತರಿಸಿ. ಯಾವುದೇ ಭಾಗದಿಂದ ಎರಡಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಆಯ್ಕೆ ಮಾಡಿಕೊಳ್ಳುವಂತಿಲ್ಲ. ಪ್ರತಿ ಪ್ರಶ್ನೆಗೆ 30 ಅಂಕಗಳು.*

### ಭಾಗ I

**18.** ವಿವಿಧ ಹಂತಗಳು ಹಾಗೂ ಫಲಿತಾಂಶಗಳನ್ನು ಗುರುತಿಸುವ ಮೂಲಕ ಭಾರತದ ರಾಷ್ಟ್ರೀಯ ಚಳುವಳಿಯ ಬಗ್ಗೆ ಒಂದು ಪ್ರಬಂಧ ಬರೆಯಿರಿ.

**19.** ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ "ಸೌಮ್ಯವಾದಿಗಳು" ಮತ್ತು "ಉಗ್ರವಾದಿ"ಗಳ ನಡುವೆ ನಡೆದ ಚರ್ಚೆಗಳನ್ನು ನಿರೂಪಿಸಿ. ಇವರ ನಡುವಿನ ಭಿನ್ನತೆಗಳ ಬಗ್ಗೆ ವಾಸ್ತವಕ್ಕಿಂತ ಊಹೆಯೇ ಹೆಚ್ಚಾಗಿತ್ತು ಎಂದು ನಿಮಗೆ ಅನಿಸುವುದೆ ?

**20.** ಭಾರತದ ವಿಭಜನೆಯ ವಿಷಯ ಹೇಗೆ ಆರಂಭಗೊಂಡಿತು ? ಅದನ್ನು ತಪ್ಪಿಸಲು ಸಾಧ್ಯವಿತ್ತೆ ?

### ಭಾಗ II

**21.** ಕಾರಣಗಳು ಮತ್ತು ಸ್ವರೂಪವನ್ನು ತಿಳಿಸುವುದರೊಂದಿಗೆ, ಫ್ರೆಂಚ್ ಕ್ರಾಂತಿಯ ಬಗ್ಗೆ ಒಂದು ಪ್ರಬಂಧ ಬರೆಯಿರಿ.

**22.** ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಕೈಗಾರಿಕಾ ಕ್ರಾಂತಿಯಿಂದಾದ ಪರಿಣಾಮಗಳನ್ನು ನಿರೂಪಿಸಿ.

# 2011

## ಇತಿಹಾಸ

## ಪ್ರಶ್ನೆಪತ್ರಿಕೆ 2

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

### ಸೂಚನೆಗಳು

ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.

ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.

ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.

ಭಾಗ *A, B* ಮತ್ತು *C* ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.
ಭಾಗ *D* ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ. ಯಾವುದೇ ಒಂದು ಭಾಗದಿಂದ 2 ಪ್ರಶ್ನೆಗೆ ಮಾತ್ರ.

**Note :** *The English version of the instructions is printed on the front cover of this question paper.*

SEAL